doc-416
T-P-2

(1)

R No KKNN 12 ಶ್ರೀ 12-12-1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ (8 ಪೈಸೆ

ಕರ್ನಾಟಕ ಭೂ ಸುಧಾರಣಾ ಕಾನೂನು

ಜಮೀನುಗಳ ಬಗ್ಗೆ ವಿವರ ಸಲ್ಲಿಸುವ ಕೊನೆಯ ದಿನಾಂಕ

ಗೇಣಿದಾರ :

ಭೂ ಒಡೆತನದ ಹಕ್ಕನ್ನು ಪಡೆಯಲು, ಪ್ರತಿಯೊಬ್ಬ ಗೇಣಿದಾರ ತಾನು ಗೇಣಿಗೆ ಪಡೆದಿರುವ ಭೂಮಿಯ ಹೆಚ್ಚಿನ ಭಾಗ ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕಿನ ನ್ಯಾಯ ಮಂಡಲಿಗೆ (ಲ್ಯಾಂಡ್ ಟ್ರಬ್ಯೂನಲ್) 31-12-1974 ರೊಳಗಾಗಿ ನಿರ್ದಿಷ್ಟ ನಮೂನೆ 7 ರಲ್ಲಿ ತಪ್ಪದೆ ಅರ್ಜಿ ಸಲ್ಲಿಸಬೇಕು.

ಭೂ ಮಾಲೀಕ :

ಸರಕಾರಿ ನಾಲೆ ಅಥವಾ ಕೆರೆಯಿಂದ ನೀರಾವರಿ ಸೌಲಭ್ಯ ಪಡೆದಿರುವ ಅಂದರೆ "ಎ' ಅಥವಾ 'ಬಿ' ಶ್ರೇಣಿಯ 10 ಎಕರೆ ಅಥವಾ ಹೆಚ್ಚು ಭೂವಿಯ ಮಾಲೀಕರು, ಮಳೆ ನೀರಿನ ಆಸರೆಯಿಂದ ಬೆಳೆಯುವ ಅಂದರೆ 'ಸಿ' ಶ್ರೇಣಿಯ 20 ಎಕರೆ ಅಥವಾ ಹೆಚ್ಚು ಭೂಮಿಯ ಮಾಲೀಕರು ಖುಷ್ಕಿ ಅಥವಾ ಒಣ 'ಡಿ' ಶ್ರೇಣಿ 40 ಎಕರೆ ಅಥವಾ ಹೆಚ್ಚು ಭೂಮಿಯನ್ನು ಹೊಂದಿರುವ ಪ್ರತಿಯೊಬ್ಬ ಭೂ ಮಾಲೀಕರು 31-12-1974 ರೊಳಗಾಗಿ, ತನ್ನ ಹಿಡುವಳಿಯ ಹೆಚ್ಚು ಭಾಗ ಯಾವ ತಾಲ್ಲೂಕಿನಲ್ಲಿದಿಯೋ ಆ ತಾಲ್ಲೂಕಿನ ತಹಸೀಲ್ದಾರರಿಗೆ ನಿರ್ದಿಷ್ಟ ನಮೂನೆ 11 ರಲ್ಲಿ ತಪ್ಪದೆ ವಿವರ ಸಲ್ಲಿಸಬೇಕು.

(ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರಿಂದ ಪ್ರಕಟಿತ)

ವುಡ್‌ಲಾಂಡ್ 13 12 74 ರಿಂದ

ಅಮೋಘ ಆರಂಭ

ಅಪೂರ್ವ ಈಸ್ಟ್‌ಮನ್ ಕಲರ್ ಮಲಯಾಳಂ ಕಲಾಕೃತಿ

ಚ ಟ್ಟ ಕ್ಕಾ ರಿ

ಪಾತ್ರ — ಲಕ್ಷ್ಮೀ ಮೋಹನ್

ದಿನ ೧೫ ಪ್ರದರ್ಶನಗಳು

ಅ ಪೆ ರಾ 12 12 74 ರಿಂದ

ಕತಿಕತ್ತುಕಂದನ್

ಪಾತ್ರ – ಕೃಷ್ಣ, ವೆಣ್ಣಿರಾಡಿ ನಿರ್ಮಲ ಎಸ್ ವಿ ರಂಗರಾವ್ ಜಯಶ್ರೀ

ಅಮೋಘ ತಮಿಳು ಚಿತ್ರ ಈಸ್ಟ್‌ಮನ್ ಕಲರ್

ಭೂಸುಧಾಣೆ ಸಂಬಂಧದ ಪರಿಹಾರ

ಮಂಗಳೂರು— ಭೂಸುಧಾರಣೆ ಸಂಬಂಧದಲ್ಲಿ ತೊಂದರೆಗೀಡಾಗುವ ವಿಧವೆಯರು ಅಂಗವಿಕಲರು, ಕಿರಿಯರಿಗೆ ಜೀವನದ ಅನುಕೂಲಕ್ಕಾಗಿ ಪರಿಹಾರ ಧನವನ್ನು ಒಂದೇಗಂಟಿನಲ್ಲಿ ಕೊಡುವ ಬಗ್ಗೆ ಸರಕಾರ ತೀವ್ರವಾಗಿ ಪರಿಶೀಲಿಸುತ್ತಿರುವುದಾಗಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು ಕುಪ್ಪೆ ವಕಾವಿನಲ್ಲಿ ರೈತ ಸಮ್ಮೇಳನ ಉದ್ಘಾಟಿಸುತ್ತಾ ಹೇಳಿದರು.

★

ನ್ಯಾಯಾಂಗ ಮಂಡಲಿಗೆ ಸೂಚನೆ

ಮಂಗಳೂರು— ಭೂಸುಧಾರಣೆ ನ್ಯಾಯಾಂಗ ಮಂಡಲಿಯವರು ಮಾಜಿ ಭೂ ಮಾಲೀಕರು ಮತ್ತು ಗೇಣಿದಾರರಲ್ಲಿನ ವ್ಯಾಜ್ಯ ವಿಷಯಗಳಲ್ಲಿ ದಯಾದಾಕ್ಷಿಣ್ಯವಿಲ್ಲದೆ ವರ್ತಿಸಬೇಕೆಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು ತಿಳಿಸಿದರು.

★

ಸಕ್ಕರೆ ಬಿಡುಗಡೆ

ನವದೆಹಲಿ— ಸರಕಾರವು ಮುಂದಿನ ತಿಂಗಳಿಗೆ 2 60 ಲಕ್ಷ ಟ್ಟ ಸಕ್ಕರೆ ಬಿಡುಗಡೆಗೆ ಆಜ್ಞೆ ಮಾಡಿದೆ

★

ಪತ್ರಿಕೋದ್ಯೋಗಿಗಳಿಂದ ನಿರೀಕ್ಷಣೆ

ಪ್ಯೆ ಸೂ ರು— ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯವನ್ನು ಆಕಾರಗೊಳಿಸಲು ರಾಷ್ಟ್ರದ ನಿಯತಿಯನ್ನು ರೂಪುಗೊಳಿಸಲು ಪತ್ರಿಕೋದ್ಯೋಗಿಗಳಿಂದ ಪ್ರಾಮಾಣಿಕತೆ ನಿರೀಕ್ಷಿಸಲಾಗಿದೆಯೆಂದು ವಿಶ್ವವಿದ್ಯಾಲಯದ ಪತ್ರಿಕೋದ್ಯೋಗಿಗಳ ಸಂಘವನ್ನು ಉದ್ಘಾಟಿಸುತ್ತಾ, ಮುನಿಸಿಪಲ್ ಕಮಿಷನರ್ ಶ್ರೀ ಸ್ವತಂತ್ರರಾವ್‌ರವರು ಹೇಳಿದರು

★

ಶ್ರೀ ಶೃಂಗೇರಿ ಜಗದ್ಗುರುಗಳವರು

ಶಿವಮೊಗ್ಗ— ಶ್ರೀ ಜಗದ್ಗುರುಗಳು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು, ಹೊಸದಾಗಿ ನಿರ್ಮಿಸಲಾಗಿರುವ ಶ್ರೀ ಶಂಕರಮಠದಲ್ಲಿ, ಭಕ್ತರ ಭಾರಿ ಸಭೆಯಲ್ಲಿ- ವಿಶ್ವದಲ್ಲಿ ಧರ್ಮ ಪ್ರತಿಪಾದಿಸಿದ ಶ್ರೀ ಶಂಕರ ಭಗವತ್ಪಾದರ ಮಾರ್ಗವನ್ನು ಭಕ್ತರು ಅನುಸರಿಸಬೇಕೆಂದು ಹೇಳಿದರು

ವಿಭಜನೆಗೆ ವಿರೋಧ

ಹುಬ್ಬಳ್ಳಿ— ಇಲ್ಲಿಯ ಮುನಿಸಿಪಲ್ ಕಾರ್ಪೋರೇಷನ್ನನ್ನು ವಿಭಜಿಸಲು ಗೌರ್ನರು ಕೊಟ್ಟ ಸಲಹೆಯನ್ನು ಮಾಜಿ ಮೇಯರ್ ಡಾ || ತೆಗ್ಗಿಮಣಿ ಬಲವಾಗಿ ವಿರೋಧಿಸಿದ್ದಾರೆ – ಈ ಸಲಹೆ ಕೊಡುವಾದರಲ್ಲಿ ಗೌರ್ನರು ತಮ್ಮ ಅಧಿಕಾರಕ್ಕೆ ಮೀರಿನಡೆದಿದಾರೆ ಎಂದಿರುವರು.

○

ರೈಲ್ವೆಯವರ ಮುಷ್ಕರ

ಮಾಸ್ಕೋ— ಚೀನಾದಲ್ಲಿ ರೈಲ್ವೇ ನೌಕರರ ಮುಷ್ಕರದಿಂದ ದಕ್ಷಿಣ ಮತ್ತು ಮಧ್ಯ ಚೀನಾ ತೊಂದರೆಗೀಡಾಗಿದೆ.

●

ರಂಗೂನಿನಲ್ಲಿ ಮಿಲಿಟರಿ ಶಾಸನ

ರಂಗೂ— ರಂಗೂನಿನಲ್ಲಿ ಸರಕಾರ ಮಿಲಿಟರಿ ಕಾನೂನು ಜಾರಿಮಾಡಿದೆ; ನಗರದಲ್ಲಿ ಕರ್ಫ್ಯೂ ಜಾರಿಯಾಗಿದೆ – ನ್ಯಾಯಬಾಹಿರ ಜನರಿಂದ ಅಗಾಧ ಲೂಟಿ ನಡೆದುದರಿಂದ ಈ ಕಾರ್ಯ – ಇದಕ್ಕೆ ಮೊದಲು 1000 ಸೈನಿಕರು ಮತ್ತು ಪೋಲೀಸರು ವಿಶ್ವವಿದ್ಯಾಲಯ ವಿಭಾಗದಲ್ಲಿ ಧಾಳಿನಡೆಸಿ ಅಲ್ಲಿ ವಿದ್ಯಾರ್ಥಿಗಳು ನಿರ್ಮಿಸಿದ್ದ ಗೋಡೆಯಿಂದ ಮಾಜಿ ವಿಶ್ವಸಂಸ್ಥಾ ಪ್ರಧಾನ ಕಾರ್ಯದರ್ಶಿ ಯು ಥಾಂಟ್‌ರ ದೇಹವನ್ನ ತಂದು, ಅವರ ಬಂಧುಗಳು ನಿರ್ಮಿಸಿದ ಗೋರಿಯಲ್ಲಿಟ್ಟಿದ್ದು ಗಲಾಟೆಗೆ ಕಾರಣವೆನ್ನಲಾಗಿದೆ.

★

7 ವರ್ಷಗಳಲ್ಲಿ 11 ದಿನ ಕೆಲಸದ್ದು

ಹೈದರಾಬಾದು– ಒಂದು ಬೇಳೆ ಗಿರಣಿಯು ಕೆಲಸ ನಿರ್ವಹಿಸಲು ಬಂಡವಾಳವಿಲ್ಲದೆ, ಅದು 7 ವರ್ಷ ಕಾಲದಲ್ಲಿ ಕೇವಲ 11 ದಿನಗಳು ಮಾತ್ರ ಕೆಲಸದ ನಡೆಸಿದರೆಂಬ ವಿಸ್ಮಯಕಾರಕ ವಾರ್ತೆಯನ್ನು ಸಹಕಾರ ಸಂಘಗಳ ರಿಜಿಸ್ಟ್ರಾರರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು

★

ಕಳ್ಳಸಾಗಾಣಿಕೆಗಾರರು

ನವದೆಹಲಿ— ಕಳೆದ ತಿಂಗಳ ಕಡೆಯ ಕಡೆಯವರೆಗೆ ಕಳ್ಳಸಾಗಾಣಿಕೆ ಅಪಾದನೆಗಾಗಿ 670 ಮಂದಿ ಬಂಧಿಸಲ್ಪಟ್ಟಿರುವುದಾಗಿ ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ಆಕರ್ಷಣೀಯ ಪಕ್ಷಿಧಾಮ !

ಮೈಸೂರಿಗೆ ಸುಮಾರು 10 ಮೈಲಿಗಳ ದೂರದಲ್ಲಿರುವ ರಂಗನತಿಟ್ಟು, ಪಕ್ಷಿಧಾಮವೊಂದೆ ಆಗಿರದೆ ಮೀನು ಮತ್ತು ಮೊಸಳೆಗಳ ತಳಿ ಅಭಿವೃದ್ಧಿ ಕೇಂದ್ರ ಸಹ ಆಗುತ್ತಿದೆ ರಂಗನತಿಟ್ಟು ನೈಸರ್ಗಿಕ ಪಕ್ಷಿಧಾಮವಾಗಿದ್ದು ಪಕ್ಷಿಗಳ ಸಂತಾನೋತ್ಪತ್ತಿ ಕೇಂದ್ರವೂ ಆಗಿರುವುದೆಂದು ವಿಶೇಷ ವರ್ಷಕ್ಕೆ ಮೂರು ಸಾವಿರದಿಂದ 5 ಸಾವಿರದಷ್ಟು ಪಕ್ಷಿಗಳು ಇಲ್ಲಿಗೆ ಬಂದುಹೋಗುತ್ತವೆ 30 ಅಡಿಗಳ ಆಳಕ್ಕೂ ಇಳಿದು ಮೀನನ್ನು ಹಿಡಿಯುವ ಸ್ಪೂನ್ ಬಿಡ್ ಎಂಬ ಪಕ್ಷಿ ಪ್ರವಾಸಿಗಳನ್ನು ಆಕರ್ಷಣೆ ಮಾಡುತ್ತವೆ.

ಶ್ರೀ ಮಹಾವೀರ ಉವಾಚ

ಎಲ್ಲ ಪ್ರಾಣಿಗಳು ದೀರ್ಘಾಯುಷ್ಯಕ್ಕಾಗಿ ಬಯಸುತ್ತವೆ ಸುಖವನ್ನು ಬಯಸುತ್ತವೆ ದುಃಖವೆಂದರೆ ಬಳಲುತ್ತವೆ ಮರಣಕ್ಕೆ ಅಂಜುತ್ತವೆ. ಬದುಕನ್ನು ಪ್ರೀತಿಸುತ್ತವೆ. ಬದುಕಿಗಾಗಿ ಕಾರ್ಯಪ್ರವೃತ್ತವಾಗುತ್ತವೆ ಸಂಸಾರದಲ್ಲಿ ಜೀವನವು ಎಲ್ಲ ಪ್ರಾಣಿಗಳಿಗೂ ಪ್ರಿಯವಾದುದು

ಭಯ ಮತ್ತು ವೈರದಿಂದ ನಿವೃತ್ತನಾದ ಸಾಧಕನು ಎಲ್ಲ ಪ್ರಾಣಿಗಳನ್ನು ಆತ್ಮಸಮಾನವಾಗಿ ಕಂಡು ಹಿಂಸಾಪ್ರವೃತ್ತಿಯಿಂದ ರಹಿತನಾಗಿರುವದು.

ಜೀವಹಿಂಸೆಯು ತನಗೇ ಆಗುವ ಹಿಂಸೆಯಾಗಿದೆ ಜೀವದಯೆಯೂ ತನಗೆ ಸಲ್ಲುವ ದಯೆಯಾಗಿದೆ ಈ ದೃಷ್ಟಿಯನ್ನರಿತುಕೊಂಡ ಆತ್ಮಾರ್ಥಿಗಳಾದ ಸಾಧಕರು ಹಿಂಸೆಯನ್ನು ಸರ್ವಥಾ ವರ್ಜಿಸುವರು.

ಲೋಕದಲ್ಲಿ ಕಂಡುಬರುವ ಉತ್ತಮ ಸುಖ, ಪ್ರಭುತ್ವ, ಸಹಜ ಸೌಂದರ್ಯ ಆರೋಗ್ಯ, ಸೌಭಾಗ್ಯ ಇವೆಲ್ಲವೂ ಅಹಿಂಸೆಯ ಫಲಗಳೇ ಆಗಿವೆ

ಈ ಮಾತನ್ನು ಚೆನ್ನಾಗಿ ತಿಳಿದುಕೊ ಲೋಕದಲ್ಲಿ ಕಂಡುಬರುವ ಎಲ್ಲ ದುಃಖಗಳೂ ಹಿಂಸೆಯ ಫಲಗಳು.

ನಿನಗೆ ಹೇಗೆ ದುಃಖವು ಅಪ್ರಿಯವೋ ಹಾಗೆ ಲೋಕದಲ್ಲಿರುವ ಎಲ್ಲ ಪ್ರಾಣಿಗಳಿಗೂ ಅದು ಅಪ್ರಿಯವಾದುದು. ಹೀಗೆ ತಿಳಿದು ಎಲ್ಲ ಪ್ರಾಣಿಗಳಲ್ಲಿ ಆತ್ಮಸಮಾನವಾದ ಆದರವಿಡು.

ಅನ್ಯರಿಗೆ ದುಃಖವನ್ನುಂಟು ಮಾಡುವ ಮಾತನ್ನು, ಅದು ಸತ್ಯವೇ ಆಗಿದ್ದರೂ ಆತಬಾರದು ಏಕೆಂದರೆ ಅದು ಪಾಪಕಾರಿಯಾಗಿದೆ.

— ಮೈಸೂರು ಪತ್ರಿಕೆ

★★

ಗಾಂಧಿ ವಾಣಿ

"ಗೋರಕ್ಷಣೆ ಮಾನವನ ಅವಿಭಾಗದಲ್ಲಿ ಒಂದು ಆಶ್ಚರ್ಯಕರವಾದ ಸಂಗತಿ: ಇದು ಮನುಷ್ಯನನ್ನು ತನ್ನ ವರ್ಗದಿಂದ ಆಚೆಗೆ ಒಯ್ಯುವುದು ಗೋವೆಂದರೆ ಸಂಪೂರ್ಣ ಅಮಾನುಷ ಲೋಕ.

ನಟರಾಜ ವಿಗ್ರಹ

ಲಾಸ್ ಏಂಜಲ್ಸ್— ನಟರಾಜ ವಿಗ್ರಹ ಪಡೆಯಲು ಭಾರತ ಸರಕಾರ ಅಮೇರಿಕಾ ಕಲಾಶೇಖರ ಕೋಟ್ಯಾಧೀಶ್ವರ ಕೈಗಾರಿಕೋದ್ಯಮಿ ಮಿ॥ ಸೈಮನ್ನರ ಮೇಲೆ ಹೂಡಿರುವ ಮೊಖದ್ದಮೆಯಲ್ಲಿ, ಭಾರತವು ವಿಗ್ರಹವನ್ನು ವಾಪಸ್ಸು ಪಡೆಯಬಹುದು, ಆದರೆ ಬೆದರಿಸಿ ಖಂಡಿತವಾಗಿ ಪಡೆಯಲಾರದು ಎಂದು ಸೈಮನ್ನರು ಹೇಳಿದರು – ಸೈಮನ್ನರ ಕಲಾಶೇಖರಣೆ 80 ಮಿಲಿಯ ಡಾಲರುಗಳಷ್ಟಿವೆ.

SHAKTI
SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಶೇಧವಾಗಲಿ



Protect the Cow

Quality Printing Neat Binding

Lakshminarasimha Press

Sivarampet, Mysore 1

Help The Gorakshana

—HumanitarianPropoganda Monthly—

Contribute Liberally
to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore